b) If so the action taken by the Government in this regard?

Answer : Sri H.D. Devegowda (Minister for Public Works and Irrigation).— a) Out of the total length of 11.00kms. of this road it is proposed to re-carpet only the bad reaches of the road from km 0.0 to 6 0 kms.

b) An estimate amounting to Rs. 5,00 lakhs has been sanction for chip carpetting in the reach from km 0.0 to 6.00 kms. The work will be started early after fixing up the agency.

Sub : Compensation payment for the land acquired for construction of G L.B.C. in Raibagh and Chikodi

Question : 202 (575) Sri A A. Nimbalker (Sadalaga).— Will the Minister for Public Works and Irrigation be pleased to state that :—

a) Whether the Government has paid the compensation for the lands acquired for the purpose of constructing the G.L.B.C. and its Distributories ;

b) Whether the full length of the G.L.BC. as planned is completed or not;

c) The total area of land acquired for the purpose of constructing G.L.B.C. in Raibagh and Chikodi Taluks?

Answer : Sri H. D. Devegowda (The Minister for Public Works and Irrigation).— a) Compensation is being paid;

b) Completed. Only the lining work is being taken up.

c) Raibagh Taluka – 388 acres; Chikodi Taluka – 461 acres.

ಶ್ರೀ ಆರ್.ಎನ್. ನಾಯಕ್.— ಅಧ್ಯಕ್ಷರೇ, ಒಂದೆರಡು ಪ್ರಶ್ನೆ ಇದೆ.

ಅಧ್ಯಕ್ಷರು.—ಕೊಶ್ಚನ್ ಹವರ್ ಮುಗಿದು ಹೋಯಿತು, Presentation of Petitions.

ಶ್ರೀ ಆರ್.ಎನ್. ನಾಯಕ್.— ಅಧ್ಯಕ್ಷರೇ, ಕೆಲವು ಪ್ರಶ್ನೆಗಳಿಗೆ ಸಮಯ ಜಾಸ್ತಿ ತೆಗೆದುಕೊಳ್ಳುತ್ತೀರಿ, ಕೆಲವು ಪ್ರಶ್ನೆಗಳಿಗೆ ಕಡಿಮೆ ಸಮಯ ತೆಗೆದುಕೊಳ್ಳುತ್ತೀರಿ. ಇದರಿಂದ ಬಹಳ ಮುಖ್ಯವಾದಂಥ ಪ್ರಶ್ನೆಗಳಿಗೆ ತೊಂದರೆಯಾಗುತ್ತಿದೆ. ಆದುದರಿಂದ ಪ್ರತಿಯೊಂದು ಪ್ರಶ್ನೆಗೂ ಇಂತಿಷ್ಟು ವೇಳೆ ಎಂದು ಹಂಚಿಬಿಡಿ.

ಅಧ್ಯಕ್ಷರು.— ಆ ರೀತಿ ಆಗುವುದಿಲ್ಲ. ಜನರಲ್ ಕೊಶ್ಚನ್ಸ್ ಜಾಸ್ತಿ ಇದ್ದರೆ ಕಾಲಾವಕಾಶ ಜಾಸ್ತಿ ಆಗುತ್ತದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಕೊನೇ ಪ್ರಶ್ನೆ, ಮಾನ್ಯ ಶಾಣಪ್ಪನವರದ್ದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ, ಅವರ ಪರವಾಗಿ ಕೇಳಲಿಕ್ಕೆ ಅನುಮತಿ ಕೊಡಿ.

ಅಧ್ಯಕ್ಷರು.— ಶಾಣಪ್ಪನವರೇ ಬಂದಿಲ್ಲ, ಅವರ ಪರವಾಗಿ ನೀವು ಯಾಕೆ ವಾದ ಮಾಡುತ್ತೀರಿ?

ಶ್ರೀ ಪಂಪಾಪತಿ.— ಇದು ಹಣಕಾಸಿನ ಪ್ರಶ್ನೆ, ಬಹಳ ಮುಖ್ಯವಾದುದು. ಆದುದರಿಂದ ಮಾನ್ಯ ಶಾಣಪ್ಪನವರ ಪರವಾಗಿ ಕೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.— ಆ ರೀತಿ ಆಗುವುದಿಲ್ಲ.

4. Presentation of Petition

ಶ್ರೀ ಹೆಚ್.ಬಿ. ಚೆಲುವಯ್ಯ.— ಮಾನ್ಯ ಅಧ್ಯಕ್ಷರೇ, ಸಂಬಳ ಹಾಗೂ ವಿಶ್ರಾಂತಿ ವೇತನದ ಸೌಲಭ್ಯಗಳಲ್ಲಿರುವ ತಾರತಮ್ಯದ ಬಗ್ಗೆ ಕರ್ನಾಟಕ ಸರಕಾರದ ನಿವೃತ್ತ ಅಧಿಕಾರಿಗಳು ಸಹಿ ಮಾಡಿರುವ ಮನವಿಯನ್ನು ಒಪ್ಪಿಸುತ್ತೇನೆ.

Mr Speaker — Petition is presented.

5. Matter Under Rule 334

ವಿಷಯ : ಬೀದರ್ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ಖೋತಾ ಉಂಟಾಗಿ ಬೆಳೆಗೆ ಹಾನಿ ಆಗಿರುವ ಬಗ್ಗೆ.

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಈವರೆಗೆ ಸುಮಾರು 20

ಸಾವಿರ ಇರಿಗೇಷನ್ ಪಂಪ್‌ಸೆಟ್ಸ್ ಇವೆ. ನದಿಗಳಿಂದ 2 ಸಾವಿರ, ಬಾವಿಗಳಿಂದ 18 ಸಾವಿರ ಇವೆ. ಅಲ್ಲಿ 50 ಸಾವಿರ ಎಕರೆ ಕೇನ್ ಗ್ರೋಯರ್ಸ್ ಇದ್ದಾರೆ. ಇದಲ್ಲದೆ 8 ತಿಂಗಳು, 6 ತಿಂಗಳುಗಳಿಂದ ನೀರು ಇಲ್ಲದೆ ತಕರಾರು ಇದೆ. ಇಳುವರಿಗೆ ಪೆಷ್ಟೋ ಜನ ಕಾದಿದ್ದಾರೆ. ಒಂದು ಲಕ್ಷ ಎಕರೆ ಭೂಮಿ ಇರಿಗೇಟ್ ಆಗುತ್ತದೆ. ಈ ಪರಿಸ್ಥಿತಿಯಲ್ಲಿ ಇವತ್ತು ಸಂಪೂರ್ಣವಾಗಿ ಜೀವನ ನಿರ್ವಾಹ ಆಗ ತಕ್ಕದ್ದು ಎಲೆಕ್ಟ್ರಿಸಿಟಿ ಮೇಲೆ. ಆದರೆ ಅಲ್ಲಿ ಎಲೆಕ್ಟ್ರಿಸಿಟಿ, ಸತತವಾಗಿ ಫೈಯಿಲ್ಯೂರ ಆಗುತ್ತಿದೆ. ಎಲೆಕ್ಟ್ರಿಸಿಟಿ ಫೈಯಿಲ್ಯೂರ್‌ಬಗ್ಗೆ, ಸರಕಾರದ ಪಾಲಿಸಿ ಏನೆಂದು ಕೇಳಿದಾಗ, ರೈತರ ಬಗ್ಗೆ ಯಾವುದೂ ಕಟ್ ಇಲ್ಲ. ಫೈಯಿಲ್ಯೂರ್ ಇಲ್ಲ, ಸತತವಾಗಿ ಕೊಡುತ್ತಿದ್ದೇವೆಂದು ಹೇಳಿದರು. ಆದರೂ ಹೋದ ವರ್ಷ ಆರು ತಿಂಗಳಿಂದ ಈಚೆಗೆ ಸತತವಾಗಿ, ಫೈಲೂರ್ ಆದಕಾರಣ, ಬೀದರ್ ಜಿಲ್ಲೆಯಲ್ಲಿ ಡಿಸೆಂಬರ್ ತಿಂಗಳಲ್ಲಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿ, 500ಜನರು ಜೈಲಿಗೆ ಹೋಗಿದ್ದಾರೆ. ನಮ್ಮಲ್ಲಿ ಸಾಮ, ದಾನ, ಭೇದ, ದಂಡ ಎಂದು ಹೇಳುತ್ತಾರೆ. ಮೊದಲು ರಿಕ್ವೆಸ್ಟ್ ಮಾಡಿಕೊಂಡರು, ಮಂದನೆ ಮಾಡಿದರು, ಹಾಗೆ ವಿನಂತಿ ಮಾಡಿದರು, ಪ್ರಾರ್ಥನೆ ಮಾಡಿದರು, ಎಷ್ಟು ರಿಕ್ವೆಸ್ಟ್ ಮಾಡಿ ಕೊಂಡರೂ, ರೆಪ್ರೆಸೆಂಟೇಷನ್ಸ್ ಕೊಟ್ಟರೂ, ಕಡೆಗೆ ಏನೂ ಆಗಲಿಲ್ಲ. ಸರಕಾರದವರಿಗೆ ಕೇಳಲಿಲ್ಲ. ಇವರಿಗೆ ಕಿವಿಡುತನ ಎಂದು ತಿಳಿದುಕೊಂಡು ಸತ್ಯಾಗ್ರಹ ಮಾಡಿದರು, ಅರೆಸ್ಟ್ ಆದರು. ಆಗ ಮಾನ್ಯ ಮಂತ್ರಿಗಳು ಸ್ವಲ್ಪ ಶೀಘ್ರವಾಗಿ ಬಂದು ಆಶ್ವಾಸನೆ ಕೊಟ್ಟರು. 6 ಗಂಟೆ ಕಡಿತ ಏನು ಮಾಡಿದ್ದೇವಪ, ಅದನ್ನು ಮೂರು ಗಂಟೆಗೆ ಇಳಿಸುತ್ತೇವೆ. 24 ತಾಸಿನಾಗ 3 ತಾಸು ಮಾತ್ರ ಕಡಿತ ಮಾಡಿ 21 ತಾಸು ವಿದ್ಯುತ್ ಕೊಡುತ್ತೇವೆಂದು ಹೇಳಿದರು. ಅದರ ನಂತರ ಸತ್ಯಾಗ್ರಹ ಪಾಪಸ್ ತೆಗೆದುಕೊಂಡಿದ್ದಾರೆ. ಇದಾಗಿ 10-12 ದಿವಸಗಳು ಆಯಿತು. ಈಗಲೂ ಸತತವಾಗಿ ವಿದ್ಯುತ್ ಫೈಯಿಲ್ಯೂರ್ ಆದಕಾರಣ ಸಾವಿರಾರು ಜನ ಡಿ.ಸಿ ಆಫೀಸ್‌ಗೆ ಬಂದು ರೆಪ್ರೆಸೆಂಟೇಷನ್ ಮಾಡುತ್ತಿದ್ದಾರೆ. ಎಲೆಕ್ಟ್ರಿಸಿಟಿ ಆಫೀಸ್‌ಗೆ ಹೋಗಿ ಮಾಡಿದ್ದಾರೆ. ತಮಗೂ ನೂರಾರು ಟೆಲಿಗ್ರಾಂ ಬಂದಿರಬಹುದು.

ಅಧ್ಯಕ್ಷರು.— ನೀವು ಭಾಷಣ ಮಾಡುತ್ತಿದ್ದೀರಲ್ಲ. There are 20 Notices under 334. I cannot go like this.

ಶ್ರೀ ಭೀಮಣ್ಣ ಖಂಡ್ರೆ.— ಅಧ್ಯಕ್ಷರೇ ಭಾಷಣ ಅಲ್ಲ. ಶ್ರೀ ವೀರಶೆಟ್ಟಿ ಎನ್ನುವವರು ಒಂದು ಟೆಲಿಗ್ರಾಂ ಕಳುಹಿಸಿದ್ದಾರೆ. It reads thus.

"There is a continuous disruption in power supply in the entire Bidar District from the last one week. Some-times 12 hours shut-down freaquent interuption in the entire District. There will be power interputions during day and night. This is the season of sugar-cane in the entire District and sugar-cane crushing is also going on by crushers. Due to power failure, sugar-cane growers and people who have irrigation pump ets are suffering a lot. Several representations from the farmers for improving the power position were failed. They are threatening to go on Bundh on 8th and 9th, please restore power supply to this District".

ದಯವಿಟ್ಟು ಇವರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು. ನಮ್ಮ ಸರಕಾರ ಇದು ಪೊವರ್‌ಫುಲ್ ಜೈಲ್‌ಭರೋ ಸರಕಾರ. ಜೈಲ್‌ಭರೋ ಪ್ರಶ್ನೆ ಬರಬಾರದು. ದಯವಿಟ್ಟು ಮಾನ್ಯ ಪವರ್‌ಲರು ಇವರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ನಾನೂ ಕೂಡಾ ಇದರ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಒಂದು ಕಡೆ ರೈತರ ಸಮಸ್ಯೆ ಇದೆ. ಬೀದರ್ ಜಿಲ್ಲೆಯ ಬಗ್ಗೆ ನಮ್ಮ ಸ್ನೇಹಿತರು ಹೇಳಿದರು. ಅದೇ ರೀತಿ ಗುಲ್ಬರ್ಗಾದಲ್ಲೂ ಕೂಡ ಇದೆ. ಎಲ್ಲಾ ಕಡೆ ಬ್ರೇಕ್ ಡೌನ್ಸ್ ಆದಕಾರಣ ಶುಗರ್‌ಕೇನ್ ಗ್ರೋಯರ್ಸ್ ಆಗಲೀ, ಫಾರ್ಮರ್ಸ್ ಆಗಲೀ, ಬಹಳ ತೊಂದರೆಯಲ್ಲಿದ್ದಾರೆ. ಇನ್ನೊಂದು ಕಡೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ವಿಡಿಯಂ ಸ್ಕೇಲ್ ಇಂಡಸ್ಟ್ರೀಸ್, ಆಲ್ ಇಂಡಸ್ಟ್ರೀಸ್, ಬಿಕಾಸ್ ಆಫ್ ದಿಸ್ ಬ್ರೇಕ್ ಡೌನ್ಸ್, ತೊಂದರೆಗೆ ಒಳಗಾಗಿವೆ. ನಮ್ಮ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್‌ನವರು ಇತ್ತೀಚೆಗೆ ಅಂದರೆ ಎರಡು ಮೂರು ದಿವಸಗಳ ಹಿಂದೆ ಒಂದು ಸ್ಟೇಟ್‌ಮೆಂಟ್ ಕೂಡಾ ಕೊಟ್ಟಿದ್ದಾರೆ. ಡಿಮ್ಯಾಂಡ್ ಅಂಡ್ ಸಪ್ಲೈ ಮಧ್ಯದಲ್ಲಿ ಸುಮಾರು ನಾಲ್ಕು ಸಾವಿರ ಮಿಲಿಯನ್ ಯೂನಿಟ್ ಕೊರತೆ ಇದೆ. ಇದರಿಂದ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳ ಪ್ರೊಡಕ್ಷನ್ ನಮ್ಮ ಕರ್ನಾಟಕದಲ್ಲಿ ಲಾಸ್ ಆಗುತ್ತಿದೆ ಎಂದೂ ಕೂಡಾ ಅವರು ಹೇಳಿದ್ದಾರೆ. ಇದು ಎರಡು ಸಾವಿರ ಕೋಟಿ ರೂಪಾಯಿಗಳ ಪ್ರೊಡಕ್ಷನ್ ಲಾಸ್ ಆಗುವುದಲ್ಲದೆ, ಹಳ್ಳಿಗಳಲ್ಲಿ ಸಾಮಾನ್ಯ

ಜನಜೀವನ ನಡೆಸತಕ್ಕಂಥ ಜನರಿಗೂ ಕೂಡಾ ತೊಂದರೆಯಾಗಿದೆ. ಇದನ್ನು ಪರಿಹಾರ ಮಾಡುವುದಕ್ಕೆ ಸ್ಪಷ್ಟವಾದಂಥ ನೀತಿ ಏನು? ಯಾವ ರೀತಿಯಾಗಿ ಇದನ್ನು ಸರಿಪಡಿಸಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೀರಿ? ಮತ್ತು ಹಳ್ಳಿಗಳಲ್ಲಿ ಆಫನ್ ಬ್ರೇಕ್ ಡೌನ್ ಆಗುತ್ತಿದೆ. ಇದಕ್ಕೆ ಯಾವ ರೀತಿಯಾಗಿ ಸಹಾಯ ಮಾಡುತ್ತೀರಿ. ಇಂಡಸ್ಟ್ರೀಸ್ ಸರಿಯಾಗಿ ನಡೆಯಬೇಕು. ಈಗಾಗಲೇ ಅನೇಕ ಕಡೆ ಲೇ ಆಫ್ ಕೊಡುತ್ತಿದ್ದಾರೆ, ಇದರಿಂದ ಅನೇಕ ಕಡೆ ಅನ್-ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಪ್ರಾರಂಭವಾಗಿದೆ. ಇನ್ನು ತೆಗೆದು ಹಾಕುವುದಕ್ಕೆ ಯಾವ ರೀತಿಯಾಗಿ, ಅಕ್ಕ ಪಕ್ಕದ ರಾಜ್ಯಗಳಿಂದ ವಿದ್ಯುಚ್ಛಕ್ತಿ ತಂದು ಸರಿಪಡಿಸುತ್ತೀರೋ ಅಥವಾ ಇರತಕ್ಕಂಥ ಇಂಡಸ್ಟ್ರೀಸ್ ಕ್ಲೋಸ್ ಮಾಡಿ ಎಂದು ಹೇಳುತ್ತೀರೋ ತಾವು ಇದರ ಬಗ್ಗೆ ಸ್ಪಷ್ಟವಾದಂಥ ತಮ್ಮ ಧೋರಣೆಯನ್ನು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.— ಸನ್ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಕಳೆದ ತಿಂಗಳು, ಅಲ್ಲಿನ ವಿದ್ಯುತ್ ಕೊರತೆ ಬಗ್ಗೆ ಜನ ಪ್ರತಿಭಟಿಸಿ, ಜೈಲಿಗೆ ಹೋದುದು ಸರಕಾರದ ಗಮನಕ್ಕೆ ಬಂದಿದೆ. ಅನಂತರ ದುರಾದೃಷ್ಟವಶಾತ್ ಅಲ್ಲಿರತಕ್ಕಂಥ ಸ್ಟಾರ್ಟರ್‌ಗಳನ್ನು ಸರಿ ಮಾಡುವ ಹೊತ್ತಿಗೆ ಶರಾವತಿಯಲ್ಲಿ ಒಂದು ಜನರೇಟರ್ ಕೆಟ್ಟು ಹೋಯಿತು. ಅದು ಹಳೇ ಮಿಷನ್, ಅದಕ್ಕೆ ಯಾರೂ ಕಾರಣರಲ್ಲ. ಅದು ಕೆಟ್ಟು ಹೋಗಿರುವುದರಿಂದ ವಿದ್ಯುತ್ ಸಪ್ಲೈ ಕಡಿತವಾಗಿ, ಇಡೀ ರಾಜ್ಯದಲ್ಲಿ ಅಂದರೆ ಬೀದರ್, ಗುಲ್ಬರ್ಗಾ, ನಿನ್ನೆ ಬಿಜಾಪುರದಲ್ಲೂ ಗೊಂದಲವಾಗಿದೆ, ಮೊನ್ನೆ ದೊಡ್ಡಬಳ್ಳಾಪುರದಲ್ಲಿ ಆದುದಕ್ಕೂ ಇದೇ ಕಾರಣ, ಉಡುಪಿಯಲ್ಲಿ ಆದುದಕ್ಕೂ ಇದೇ ಕಾರಣವಾಗಿದೆ. ಮೊದಲು ಸುಮಾರು 200 ಮೆಗಾವ್ಯಾಟ್ ಕೊರತೆ ಇದ್ದಂಥ ಈ ರಾಜ್ಯಕ್ಕೆ ಪಕ್ಕ 100 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂಥ ಜನರೇಟರ್ ಬ್ರೇಕ್‌ಡೌನ್ ಆಗಿದೆ. ಅದನ್ನು ಅತ್ಯಂತ ತ್ವರಿತವಾಗಿ ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಏನೇ ತ್ವರಿತವಾಗಿ ಮಾಡಿದರೂ ಮಾರ್ಚ್ 15ರವರೆಗೆ ರಿಪೇರಿ ಆಗತಕ್ಕಂಥ ಸಂಭವ ಇಲ್ಲ. ಆದುದರಿಂದ ಮಾರ್ಚ್ 15ರವರೆಗೆ, ಏನು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ನಿನ್ನೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ತಜ್ಞರನ್ನು, ಅಧಿಕಾರಿಗಳನ್ನು ಸಭೆ ಕರೆದು ವಿಚಾರ ಮಾಡಿದ್ದೇವೆ. ಬಹಳ ವಿದ್ಯುತ್ ಉಪಯೋಗ ಮಾಡತಕ್ಕಂಥ ಕೆಲವು ಉದ್ಯಮಗಳನ್ನು ಒಂದು ವಾರದವರೆಗೆ ನಿಲ್ಲಿಸಬೇಕಾದ ಪ್ರಸಂಗ ಬರಬಹುದು. ಅದರ ಬಗ್ಗೆ ಇಂದು ತೀರ್ಮಾನಕ್ಕೆ ಗೊಳ್ಳುತ್ತೇವೆ. ಈ ದೃಷ್ಟಿಯಿಂದ ಈಗ ಹಳ್ಳಿಗಾಡಿನಲ್ಲಿರತಕ್ಕಂಥ ಇರಿಗೇಷನ್ ಪಂಪ್‌ಸೆಟ್ಸ್, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್, ಹ್ಯಾಂಡಲ್ಲೂಮ್ ವೀವರ್ಸ್‌ಗೆ ಆಗಿರುವ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದಕ್ಕೆ ಯಾವ ರೀತಿ ಹೆಜ್ಜೆ ಇಡಬೇಕೆಂಬುದನ್ನು ಇವತ್ತು ಸಾಯಂಕಾಲ ನಾವು ತೀರ್ಮಾನ ಮಾಡುತ್ತೇವೆ. ಅದರ ಬಗ್ಗೆ ನಾಳೆ ಸಮಗ್ರವಾದ ಹೇಳಿಕೆಯನ್ನು ಕೊಡುತ್ತೇನೆ. ಬೀದರ್ ಗುಲ್ಬರ್ಗಾ, ವಿಜಾಪುರ, ಮುಂತಾದ ಕಡೆ ಎಲ್ಲೆಲ್ಲಿ ಇರಿಗೇಷನ್ ಪಂಪ್‌ಸೆಟ್ಟುಗಳು ಬಹಳ ಇವೆ, ಅಲ್ಲಿ ಕೊರತೆ ಜಾಸ್ತಿಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ.

(ii) ವಿಷಯ : ಕರ್ನಾಟಕ ಪವರ್ ಕಾರ್ಪೊರೇಷನ್ ಕಾರ್ಮಿಕರ ಮುಷ್ಕರ

ಶ್ರೀ ಮೈಕೇಲ್ ಫರ್ನಾಂಡೀಸ್.— ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಕಾರ್ಮಿಕರ ಕೆಲವು ಕುಂದುಕೊರತೆಗಳು ಇದ್ದಾಗ್ಯೂ, ಅನೇಕ ವರ್ಷಗಳಿಂದ ಹಾಗೆಯೇ ಇಟ್ಟುಕೊಂಡು ಅವುಗಳನ್ನು ಇದುವರೆವಿಗೂ ಸರಿಪಡಿಸಿಲ್ಲ. ಅವರು ಎಷ್ಟೇ ಪ್ರಯತ್ನ ಮಾಡಿದರೂ ಸಹ, ಮಾತುಕತೆಯಾಗಿದ್ದರೂ ಸಹ, ಅವರ ಬೇಡಿಕೆಗೆ ಪರಿಹಾರ ಸಿಗಲಿಲ್ಲ. ಇದರ ಸಲುವಾಗಿ ಕಳೆದ ಎರಡು ವಾರದಿಂದಲೂ ಚಳುವಳಿಯನ್ನು ಆರಂಭಿಸಿದ್ದಾರೆ. ಅದರ ಸಾಂಕೇತಿಕವಾಗಿ ನಿನ್ನೆ, ಇವತ್ತು ಮತ್ತು ನಾಳೆ ಕರ್ನಾಟಕ ಪವರ್ ಕಾರ್ಪೊರೇಷನ್‌ನ ಕಛೇರಿ ಮುಂದೆ ಧರಣಿ ಕುಳಿತುಕೊಂಡಿದ್ದಾರೆ. ಅಲ್ಲಿ ಸುಮಾರು 100 ಪ್ರತಿನಿಧಿಗಳು ಇದ್ದಾರೆ. ಕೆಲಸಕ್ಕೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಶಾಂತಿಯುತವಾಗಿ ಈ ಒಂದು ಹೋರಾಟವನ್ನು ನಡೆಸುತ್ತಿದ್ದಾರೆ. ಇವರ ಬೇಡಿಕೆಗಳಾದರೂ ಸಾಮಾನ್ಯವಾದವುಗಳು. ಖಾಲಿ ಬಿದ್ದಿರುವಂತಹ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವುದು. ಬಡ್ತಿ ಕೊಡತಕ್ಕಂತಹದ್ದು, ಮತ್ತೆ ಮೇಲಿನ ಹುದ್ದೆಗಳಿಗೆ ನೇಮಕಾತಿಯನ್ನು ಮಾಡುವಾಗ ಇವರಿಗೆ ಅದ್ಯತೆಯನ್ನು ಕೊಡತಕ್ಕಂತಹದ್ದು. ಇವರಿಗೆ ಅನುಭವ ಇದೆ, ಜೊತೆಗೆ ಕುಶಲತೆ ಇದೆ. ಜೊತೆಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದುಕೊಂಡವರೂ ಆಗಿದ್ದಾರೆ. ಹೀಗಿದ್ದರೂ ಸಹ ಮೇಲಿನ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಾಗ ಇವರನ್ನು ಕೈಬಿಟ್ಟು ನೇರವಾಗಿ ಮೇಲಿನ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಮತ್ತೆ ಕೆಲವರನ್ನು ಗುತ್ತಿಗೆ ಆಧಾರದ ಮೇಲೆ ಇಟ್ಟುಕೊಂಡಿದ್ದಾರೆ. ಅವರನ್ನು ಖಾಯಂ ಮಾಡಬೇಕು ಎನ್ನುವಂತಹದ್ದು. ಮತ್ತೆ ಈ ಸಂಘಕ್ಕೆ ಮಾನ್ಯತೆಯನ್ನು ಕೊಡತಕ್ಕಂತಹದ್ದು. ಹಿಂದಿನ ಸರ್ಕಾರ ಈ ಸಂಘಕ್ಕೆ ಹೆಚ್ಚಿನ ಪ್ರಾತಿನಿಧ್ಯ ಇದ್ದರೂ ಮಾನ್ಯತೆಯನ್ನು ಕೊಟ್ಟಿಲ್ಲ. ಆದ್ದರಿಂದ ಈ ಸರ್ಕಾರದವರು ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಕೂಡಲೇ ಪರಿಹಾರವನ್ನು ಕೊಡಬೇಕಾಗಿದೆ. ಇಲ್ಲದಿದ್ದರೆ ಅಲ್ಲಿನ ಪರಿಸ್ಥಿತಿ ಹೆಚ್ಚು ಕಡಿಮೆ ಆಗುವ ಸಂಭವ ಬರಬಹುದು,